# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಡಾ.ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು)

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 158

ಉತ್ತರಿಸಬೇಕಾದ ದಿನಾಂಕ : 14.02.2024

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಹಾಲಿನ ಬೆಲೆ ಬೇರೆ ರಾಜ್ಯಗಳಿಗಿಂತ ಕಡಿಮೆ ದರ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ಹಾಲು ಮಹಾಮಂಡಳ ವ್ಯಾಪ್ತಿಯ ಜಿಲ್ಲಾ ಹಾಲು ಒಕ್ಕೂಟಗಳ ಹಾಲು ಖರೀದಿ ದರ ಪ್ರತಿ ಲೀಟರ್‌ಗೆ ಸರಾಸರಿ ರೂ. 32.42 ಇದ್ದು, ಹೊರ ರಾಜ್ಯಗಳಿಗೆ ಹೋಲಿಸಿದ್ದಲ್ಲಿ ಮಹಾರಾಷ್ಟ್ರದಲ್ಲಿ ಕಡಿಮೆ ಇದ್ದು, ಆಂಧ್ರಪ್ರದೇಶ, ಕೇರಳ ಮತ್ತು ಗುಜರಾತ್ ರಾಜ್ಯಗಳಲ್ಲಿ ಪ್ರತಿ ಲೀಟರ್‌ಗೆ ರೂ. 3.50 ರಿಂದ ರೂ. 9.00 ವರೆಗೆ ಹೆಚ್ಚಾಗಿರುತ್ತದೆ. ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.<br><br>ರಾಜ್ಯದಲ್ಲಿ ನಂದಿನಿ ಟೋನ್ಡ್ ಹಾಲಿನ ಬೆಲೆ ಪ್ರತಿ ಲೀಟರ್‌ಗೆ ಮಾರಾಟದ ದರ ರೂ. 42.00 ಇದ್ದು, ಹೊರ ರಾಜ್ಯಗಳಿಗೆ ಹೋಲಿಕೆ ಮಾಡಿದಲ್ಲಿ ರಾಜ್ಯದ ನಂದಿನಿ ಹಾಲಿನ ಮಾರಾಟ ದರ ಪ್ರತಿ ಲೀಟರ್‌ಗೆ ರೂ. 10.00 ರಿಂದ ರೂ.16.00 ರವರೆಗೆ ಕಡಿಮೆ ಇರುತ್ತದೆ. ವಿವರವನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ. |
| ಆ | ಬಂದಿದ್ದಲ್ಲಿ, ರಾಜ್ಯದಲ್ಲಿಯೂ ಸಹ ರೈತರಿಂದ ಖರೀದಿಸುವ ಹಾಲಿಗೆ ಬೆಲೆ ಏರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ರಾಜ್ಯ ಸರ್ಕಾರವು ದಿನಾಂಕ:01.08.2023 ರಿಂದ ಹಾಲಿನ ಮಾರಾಟ ದರವನ್ನು ಪ್ರತಿ ಲೀಟರ್‌ಗೆ ರೂ.3.00 ಹೆಚ್ಚಿಸಿದ್ದು, ಹೆಚ್ಚಿಸಿದ್ದ ಪೂರ್ಣ ಮೊತ್ತವನ್ನು ಹಾಲು ಉತ್ಪಾದಕರಿಗೆ ನೀಡಲಾಗುತ್ತಿದೆ. |
| ಇ | ಈ ರೀತಿ ಬೆಲೆ ಹೆಚ್ಚಿಸುವುದರಿಂದ ರೈತರಿಗೆ ಹಾಗೂ ಹಸು ಸಾಕಾಣಿಕೆದಾರರಿಗೆ ಅನುಕೂಲವಾಗುವುದಿಲ್ಲವೇ; | ಹಾಲಿನ ಖರೀದಿ ದರ ಹೆಚ್ಚಿಸುವುದರಿಂದ ರೈತರಿಗೆ ಹಾಗೂ ಹಸು ಸಾಕಾಣಿಕೆದಾರರಿಗೆ ಆರ್ಥಿಕವಾಗಿ ಅನುಕೂಲವಾಗುತ್ತದೆ. |
| ಈ | ರಾಜ್ಯದಲ್ಲಿ ಪ್ರಸ್ತುತವಿರುವ ಹಾಲಿನ ಬೆಲೆಯನ್ನು ಹೆಚ್ಚು ಮಾಡಲು ಸರ್ಕಾರ ಕ್ರಮಕೈಗೊಳ್ಳುವುದೇ; | ಪ್ರಸ್ತುತ ವಿದ್ಯಮಾನಗಳನ್ನು ಅವಲೋಕಿಸಿ ಮುಂದಿನ ದಿನಗಳಲ್ಲಿ ಕ್ರಮಕೈಗೊಳ್ಳಲು ಪರಿಶೀಲಿಸಲಾಗುವುದು. |
| ಉ | ಹಾಗಿದ್ದಲ್ಲಿ, ಎಂದಿನಿಂದ ಬೆಲೆ ಹೆಚ್ಚಿಸಲಾಗುವುದು ಮತ್ತು ಇದನ್ನು ಎಂದಿನಿಂದ ಜಾರಿಗೆ ತರಲಾಗುವುದು? | |

ಇ-ಪಸಂಮೀ 12 ಸಲೆವಿ 2024

(ಕೆ. ವೆಂಕಟೇಶ್)

ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಡಾ. ವೈ.ಎ. ನಾರಾಯಣಸ್ವಾಮಿ (ಶಿಕ್ಷಣ ಕ್ಷೇತ್ರದಿಂದ ಚುನಾಯಿತರಾದವರು) ಇವರು ಸದಸನದಲ್ಲಿ ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 158 ಕ್ಕೆ ಅನುಬಂಧ**

**ಹೊರ ರಾಜ್ಯದಲ್ಲಿರುವ ಹಾಲಿನ ಸರಾಸರಿ ಖರೀದಿ ದರದ ವಿವರ:**

| **ರಾಜ್ಯದ ಹೆಸರು** | **ಕರ್ನಾಟಕ (ನಂದಿನಿ ಬ್ರ್ಯಾಂಡ್)** | **ಆಂಧ್ರಪ್ರದೇಶ (ವಿಜಯ ಬ್ರ್ಯಾಂಡ್)** | **ಕೇರಳ (ಮಿಲ್ಮಾ ಬ್ರ್ಯಾಂಡ್)** | **ಮಹಾರಾಷ್ಟ್ರ (ಅಮೂಲ್ ಬ್ರ್ಯಾಂಡ್)** | **ಗುಜರಾತ್ (ಅಮೂಲ್ ಬ್ರ್ಯಾಂಡ್)** |
|---|---|---|---|---|---|
| ಹಾಲಿನ ಖರೀದಿ ದರ | **32.42** | **35.99** | **41.76** | **29.72** | **36.75** |
| ಹಾಲಿನ ಮಾರಾಟದರ | **42.00** | **58.00** | **52.00** | **54.00** | **54.00** |